


ಬೆಂಗಳೂರಿನ ಪರಿಸ್ಥಿತಿಯೇ ಹಾಗಿರುವಾಗ ಪಕ್ಷದಲ್ಲಿ ಉಸಿರು ಕಟ್ಟುವ ವಾತಾವರಣ ಇದೆ ಅಂತ ಹೇಗೆ ಹೇಳುತ್ತೀರಿ?







**ಮೇಷ್ಟ್ರು:** ಸುದ್ದಿ ಪ್ರಸಾರದ ಮುಖ್ಯ ಮಾಧ್ಯಮಗಳು ಯಾವುವು?
**ಟಿಂಕು:** ವೆರಿ ವೆರಿ ಈಸಿ ಪ್ರಶ್ನೆ ಕೇಳಿದಿರಿ ಸರ್.
**ಮೇಷ್ಟ್ರು:** ಹಾಗಾದ್ರೆ ಉತ್ತರ ಹೇಳು.
**ಟಿಂಕು:** ಟೆಲಿಫೋನ್, ಮೊಬೈಲ್ ಫೋನ್, ಟಿ.ವಿ., ಯೂಟ್ಯೂಬ್ ಮತ್ತು ನಮ್ ಅಪಾರ್ಟ್ಮೆಂಟ್‌ನಲ್ಲಿರುವ ಪಂಕಜಾ ಆಂಟಿ.

***

**ಗುಂಡ:** ಚುನಾವಣೆ ಮುಗಿದ ಮೇಲೂ ಎಣ್ಣೆ ಪಾರ್ಟಿಗಳು ಮಿತಿ ಮೀರ್ತಾ ಇವೆ. ಎಲ್ ನೋಡಿದ್ರೂ ಅವುಗಳದ್ದೇ ಕಾಟ! ಅಟೆಂಡ್ ಮಾಡಿ ಮಾಡಿ ತುಂಬಾ ತಲೆ ನೋವು ಬಂದಿದೆ. ಇದರ ಬಗ್ಗೆ ಒಂದ್ ಸೆಷನ್ ಕೌನ್ಸಿಲಿಂಗ್ ಮಾಡಿ.
**ಡಾಕ್ಟರ್:** ಡಿಟೇಲ್ ಆಗಿ ಮಾಡ್ತೀನಿ. ರಾತ್ರಿ ಎಂಟು ಗಂಟೆ ಸುಮಾರಿಗೆ ಎಂ.ಜಿ.ರಸ್ತೆಯಲ್ಲಿರುವ ಬಾರ್‌ಗೆ ಬನ್ನಿ.

***

**ರಿನ್ನಿ:** ಹೇಗಾದ್ರು ಮಾಡಿ, ಡೈವೋರ್ಸ್ ಕ್ಯಾನ್ಸಲ್ ಮಾಡಿಸಿ ಮತ್ತೆ ನಮ್ಮಿಬ್ಬರನ್ನೂ ಒಗ್ಗೂಡಿಸಿ ಲಾಯರ್ ಸಾಹೇಬ್ರೆ.
**ಲಾಯರ್:** ಅಲ್ಲಮ್ಮಾ, ಆದಷ್ಟು ಬೇಗ ಡೈವೋರ್ಸ್ ಕೊಡಿಸಿ ಅಂತ ದುಂಬಾಲು ಬಿದ್ದು ತಗೊಂಡಿದ್ದೆ. ಈಗ ಉಲ್ಟಾ ಹೊಡೀತಾ ಇದ್ದೀಯಾ. ಯಾಕೆ ಏನಾಯ್ತು?
**ರಿನ್ನಿ:** ಡೈವೋರ್ಸ್ ತಗೊಂಡ ಮೇಲೆ ಅವನು ಸಿಕ್ಕಾಪಟ್ಟೆ ಹಾರಾಡ್ತಿದ್ದಾನೆ. ಅದನ್ನ ನನ್ನ ಕಣ್ಣಿಂದ ನೋಡೋಕೆ ಆಗ್ತಿಲ್ಲ ಅದ್ಕೆ.

***

**ಪೀಟರ್:** ನನ್ನ ಮಗಳು ರಸ್ತೆಯಲ್ಲಿ ಯಾವಾಗಲೂ ತಲೆ ತಗ್ಗಿಸಿಕೊಂಡು ಹೋಗುವ ಹಾಗೆ ಏನಾದ್ರೂ ಔಷಧಿ ಇದ್ರೆ ಬರೆದು ಕೊಡಿ.
**ಡಾಕ್ಟರ್:** ಅಯ್ಯೋ ಅದಕ್ಕೆಲ್ಲಾ ಯಾವ ಔಷಧಿ ಕೊಡಲಿ.
**ಪೀಟರ್:** ಏನಾದ್ರೂ ಕೊಡಿ ಡಾಕ್ಟರ್.
**ಡಾಕ್ಟರ್:** ಒಂದ್ ಕೆಲಸ ಮಾಡಿ. ನಿಮ್ಮ ಮಗಳಿಗೆ 5 ಜಿ ಐಫೋನ್ ಕೊಡಿಸಿ. ಅದು ಇರೋವರೆಗೂ ಅವಳು ತಲೆ ಎತ್ತಿ ಯಾರನ್ನೂ ನೋಡೋದಿಲ್ಲ.

***

**ಹನುಮ:** ನಿನ್ನ ಕಣ್ಣುಗಳನ್ನೇ ನೋಡ್ತಾ ಕುಳಿತರೆ, ಪೂರಾ ಕೆ ಪೂರಾ ಪ್ರಪಂಚ ಕಂಡಂಗೆ ಆಗುತ್ತೆ.

(ಮೆಜೆಸ್ಟಿಕ್ ಬಸ್ ಸ್ಟ್ಯಾಂಡ್‌ನಲ್ಲಿ ತನ್ನ ಹೆಂಡತಿಗೆ)
**ಗುಳ್ಳ:** ರಂಗಿ, ಆಕಸ್ಮಾತ್ ಈ ಬೆಂಗಳೂರಿನಲ್ಲಿ ನಾನು ಕಳೆದು ಹೋದರೆ ಏನ್ ಮಾಡ್ತೀಯ?
**ರಂಗಿ:** ಅಯ್ಯೋ ಅಷ್ಟೂ ಗೊತ್ತಾಗೋದಿಲ್ವಾ ನಂಗೆ. ತಕ್ಷಣ ಪೇಪರ್‌ನಲ್ಲಿ ಜಾಹೀರಾತು ಹಾಕಿಸ್ತೀನಿ.
**ಗುಳ್ಳ:** ಭಲೇ ರಂಗಿ, ಏನಂತಾ ಜಾಹೀರಾತು ಹಾಕಿಸ್ತೀಯಾ?
**ರಂಗಿ:** ತಕ್ಷಣ ಗಂಡ ಬೇಕಾಗಿದ್ದಾನೆ ಅಂತ.

**ಗುಂಡ:** ಏಯ್!.. ಮನೆಗೆ ಬರೋಕೆ ಎಷ್ಟು ಹೊತ್ತು ಮಾಡ್ತೀಯಾ? ಸ್ಕೂಲ್ ಬಿಟ್ಟು ಆಗಲೇ ನಾಕು ಗಂಟೆ ಆಯ್ತು, ಇಷ್ಟೊತ್ತು ಎಲ್ಲಿದ್ದೆ, ಏನು ಮಾಡುತ್ತಿದ್ದೆ?
**ಮರಿ ಗುಂಡ:** ಅದಾ... ದಾರೀಲಿ ಬರೋವಾಗ ನನ್ನ ಫ್ರೆಂಡ್ ಸಿಕ್ಕಿ ನಾನೇ ನಿಮ್ಮ ಮನೆಗೆ ಡ್ರಾಪ್ ಕೊಡ್ತೀನಿ ಅಂತ ಬಲವಂತ ಮಾಡಿ ಅವನ ಗಾಡಿಯಲ್ಲೇ ಕರೆದುಕೊಂಡು ಬಂದ.
**ಗುಂಡ:** ಗಾಡೀಲಿ ಬಂದ್ರೂ ಇಷ್ಟೊತ್ತಾ? ಅದ್ಯಾವ ಸೀಮೆ ಗಾಡಿನೋ ಅದು?
**ಮರಿ ಗುಂಡ:** ರೋಡ್ ರೋಲರ್!

**ಲಚ್ಚಿ:** ಅಯ್ಯೋ ಪರ್ ಪಂಚ ಕಾಣುತ್ತೋ ಇಲ್ವೊ ನನ್ನ ಎಮ್ಮೆ ಕಾಣ್ತಾ ಇದೀಯೋ ಇಲ್ವೊ ಅಂತ ನೋಡಿ ಹೇಳು. ಬೆಳಿಗ್ಗೆಯಿಂದ ಅದು ಕಾಣ್ತಿಲ್ಲ.

***

**ಪಮ್ಮಿ:** ಇಲ್ಲಿಂದ ಬ್ಯಾಂಕ್ ಎಷ್ಟು ದೂರ ಇದೆ ಸಾರ್?
**ನಿಮ್ಮಿ:** ಇಲ್ಲಿಂದ 2 ಕಿಲೋ ಮೀಟರ್.
**ಪಮ್ಮಿ:** ಅಯ್ಯೋ ಅಷ್ಟು ದೂರಾನಾ? ಅಲ್ಲಿಗೆ ಆಟೊದಲ್ಲಿ ಹೋಗಲೇ, ನಡೆದುಕೊಂಡು ಹೋಗಲೇ?
**ನಿಮ್ಮಿ:** ಯಾವ್ದೂ ಬೇಡ ಸುಮ್ನೆ ನನ್ನ ಹಿಂದೆ ನಿಂತ್ಕೊ. ಬ್ಯಾಂಕ್‌ಗೆ ಹೋಗುವವರ ಕ್ಯೂನಲ್ಲಿ ನಾನೇ ಕೊನೆ.

***

(ರಾಮಣ್ಣ ಸತ್ತು ಸ್ವರ್ಗಕ್ಕೆ ಹೋದ)
**ಇಂದ್ರ:** ಮಾನವ ಇಲ್ಲಿಗೆ ನಿನ್ನನ್ನ ಕಳುಹಿಸಿ ಕೊಟ್ಟಿದ್ದು ಯಾರು?
**ವೆಂಕಟ್:** ಏನು ಹೇಳಲಿ ಮಹಾಸ್ವಾಮಿ, ನನ್ನ ಕಿಡ್ನಿ ಆಪರೇಷನ್ ಮಾಡಿದ ಡಾಕ್ಟರ್.

***

**ಶೀನ:** ಕಳೆದ ವರ್ಷ ನಮ್ಮ ತೋಟದಲ್ಲಿ ಜಾರಿಬಿದ್ದ ನಿನ್ನ ಹೆಂಡತಿಯನ್ನು ಕಾಪಾಡಿದ್ದು ಈ ಡಾಕ್ಟರ್.
**ವೆಂಕಟ್:** ಹೌದಾ. ಹೋಗಲಿ ಬಿಡು ಕೆಲವು ಸಲ ದೊಡ್ಡ ದೊಡ್ಡ ಡಾಕ್ಟರ್‌ಗಳೂ ತಪ್ಪು ಮಾಡಿ ಬಿಡ್ತಾರೆ. ಎಲ್ಲಾ ನಾವು ಪಡೆದುಕೊಂಡು ಬಂದದ್ದು.

***

ಬಸ್ಸು ಚಲಿಸುತ್ತಿದ್ದಾಗ ಮುಗ್ಗರಿಸಿ ಹುಡುಗ ಹುಡುಗಿಯ ಮೇಲೆ ಬಿದ್ದ..
**ಹುಡುಗಿ (ಸಿಟ್ಟಿನಿಂದ):** ಏನು ಮಾಡುತ್ತಿರುವೆ?
**ಹುಡುಗ:** ಮುಂಬೈ ಯೂನಿವರ್ಸಿಟಿಯಲ್ಲಿ ಎಂ.ಎ.!

ಸಂಗ್ರಹ: ಆರ್. ವೀರೇಶ್ ಕುಮಾರ್, ಬೆಂಗಳೂರು